**ಸಾಕ್ಷಿಯನ್ನು ದಿನಾಂಕಃ 27.07.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎ.ಸಿ.ಆರ್. ವಕೀಲರಿಂದಃ**

ಮೂಲ ದಾವೆ ಸಂಖ್ಯೆ 98/2021 ರಲ್ಲಿ ಮಂಜಪ್ಪರವರು ನನ್ನ ವಿರುದ್ಧ ತಡೆಯಾಜ್ಞೆ ಪಡೆದ ನಂತರ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುತ್ತೀರಾ ಎಂದರೆ ಸದರಿ ಮಂಜಪ್ಪನಿಗು ಮತ್ತು ನನಗು ಯಾವುದೇ ಸಂಬಂಧವಿರುವುದಿಲ್ಲ. 1945-1946 ರಲ್ಲಿ ಗ್ರಾಮ ಪಂಚಾಯಿತಿ ಇರಲಿಲ್ಲವೆಂದರೆ ಸರಿಯಲ್ಲ. ನಿ.ಪಿ.-1 ರ ಮೇಲೆ ಲ್ಯಾಮಿನೇಷನ್ ಮಾಡಿಸಿ ಅದರ ಮೇಲೆ ಮೊಹರು ಹಾಕಿರುತ್ತಾರೆಂದರೆ ಸರಿಯಲ್ಲ. ನಿವೇಶನವನ್ನು ಕ್ರಯಕ್ಕೆ ಪಡೆದ ನಂತರ ಪ್ರತಿ ವರ್ಷ ಕಂದಾಯ ಪಾವತಿಸಬೇಕಾಗುತ್ತದೆಂದರೆ ಸರಿ. ನಾನು 2021 ನೇ ಸಾಲಿನ ಕಂದಾಯ ಪಾವತಿ ರಸೀದಿಯನ್ನು ಮಾತ್ರ ಹಾಜರುಪಡಿಸಿರುತ್ತೇನೆಂದರೆ ಸರಿ ಆದರೆ ನಾನು ಹಿಂದಿನ ಕಂದಾಯವನ್ನು ಪಾವತಿಸಿರುತ್ತೇನೆ. 2021 ಕ್ಕಿಂತ ಪೂರ್ವದ ಸಾಲಿನ ಕಂದಾಯ ಪಾವತಿ ರಸೀದಿಗಳನ್ನು ಹಾಜರುಪಡಿಸಿಲ್ಲ. ನಿ.ಪಿ.-7 ರಲ್ಲಿ ನನಗೆ ಸೇರಿದ ಸ್ವತ್ತಿನ ಸಂಖ್ಯೆಯನ್ನು ನಮೂದಿಸಿಲ್ಲವೆಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇನೆಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಸಾಗುವಳಿ ಚೀಟಿಯಲ್ಲಿ ವಿಸ್ತೀರ್ಣವನ್ನಾಗಲೀ ಅಥವಾ ಚೆಕ್ ಬಂದಿಯನ್ನಾಗಲೀ ನಮೂದಿಸಿಲ್ಲವೆಂದರೆ ವಿಸ್ತೀರ್ಣವನ್ನು ನಮೂದಿಸಿರುತ್ತಾರೆ. ಸಾಕ್ಷಿಯು ನಿ.ಪಿ.-1 ನ್ನು ನೋಡಿ ವಿಸ್ತೀರ್ಣವನ್ನು ನಮೂದಿಸಿಲ್ಲವೆಂದು ನುಡಿಯುತ್ತಾರೆ. ಯಾವುದೇ ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿ ಮೂಲ ದಾಖಲೆಗಳನ್ನು ನೋಡಿ ಖರೀದಿಸಬೇಕಾಗುತ್ತದೆಂದರೆ ಸರಿ. ದಾವಾ ಸ್ವತ್ತು ಸ.ನಂ. 19 ರಲ್ಲಿ ನಿವೇಶನಗಳನ್ನಾಗಿ ಮಾಡಿ ವಿತರಣೆ ಮಾಡಿರುವ ನಿವೇಶನವಾಗಿರುತ್ತದೆ. ಈ ರೀತಿ ಸ.ನಂ. 19 ರಲ್ಲಿ ನಿವೇಶನಗಳನ್ನಾಗಿ ಮಾಡಿರುತ್ತಾರೆಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ. ಸಾಮಾನ್ಯವಾಗಿ ಸರ್ಕಾರದಿಂದ ನಿವೇಶನಗಳನ್ನು ಮಾಡಿ ವಿತರಿಸುವಾಗ ನಕ್ಷೆ ತಯಾರಿಸಿರುತ್ತಾರೆಂದರೆ ಸರಿ. ಆ ರೀತಿ ನಿವೇಶನಗಳನ್ನು ಮಾಡಿದ್ದರೆ ನಕ್ಷೆ ಇರುತ್ತದೆಂದರೆ ನನಗೆ ಗೊತ್ತಿಲ್ಲ. ನಾನು ಮಂಜಪ್ಪರವರಿಗೆ ಸೇರಿದ 27 ಗುಂಟೆ ಜಮೀನಿನಲ್ಲಿ ಮನೆ ಕಟ್ಟಲು ಪ್ರಯತ್ನಿಸಿರುತ್ತೇನೆಂದರೆ ಸರಿಯಲ್ಲ. ಸದರಿ ಮಂಜಪ್ಪ ತಡೆಯಾಜ್ಞೆ ಪಡೆದ ನಂತರವೇ ನಾನು ಅವರಿಗೆ ತೊಂದರೆ ಕೊಡುವುದನ್ನು ನಿಲ್ಲಿಸಿರುತ್ತೇನೆಂದರೆ ನಾನೇನು ತೊಂದರೆ ಕೊಟ್ಟಿರುವುದಿಲ್ಲ, ಅವರೇ ನನಗೆ ತೊಂದರೆ

This is a True Copy of the Court Records Online. Authenticated @ districts.ecourtsindia.com/cnr/KAMS210003382021/truecopy/order-5.pdf

ಕೊಟ್ಟಿರುತ್ತಾರೆ. ದಾವಾ ಸ್ವತ್ತಿಗು ಮತ್ತು ಪ್ರತಿವಾದಿಗು ಯಾವುದೇ ಸಂಬಂಧವಿರುವುದಿಲ್ಲವೆಂದರೆ ಅವರು ತೊಂದರೆ ಕೊಟ್ಟಿದ್ದರಿಂದ ಈ ದಾವೆ ಸಲ್ಲಿಸಿರುತ್ತೇನೆ. ಸ.ನಂ. 19 ರಲ್ಲಿರುವ 05 ಎಕರೆ 33 ಗುಂಟೆ ಪೈಕಿ 27 ಗುಂಟೆ ಜಮೀನನ್ನು ಪ್ರತಿವಾದಿ ಮಂಜಪ್ಪ ಎಂಬುವವರಿಗೆ ಮಾರಾಟ ಮಾಡಿದ್ದು, ನಂತರ ನಾನು ಮಂಜಪ್ಪರವರಿಗೆ ತೊಂದರೆ ಕೊಡಲು ಪ್ರಾರಂಭಿಸಿರುತ್ತೇನೆಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ಯಾವತ್ತೂ ಸ್ವಾಧೀನದಲ್ಲಿಲ್ಲದೇ ಇರುವುದರಿಂದ ಪ್ರತಿವಾದಿ ನನ್ನ ಸ್ವಾಧೀನಕ್ಕೆ ತೊಂದರೆ ಕೊಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದರೆ ಸರಿಯಲ್ಲ. ಪ್ರತಿವಾದಿ ಮಾರಾಟ ಮಾಡಿರುವ 27 ಗುಂಟೆ ಜಮೀನಿಗೆ ಹೋಗಿ ಮನೆ ಕಟ್ಟಲು ಪ್ರಯತ್ನಿಸಿರುತ್ತೇನೆಂದರೆ ಸರಿಯಲ್ಲ. ಸ.ನಂ. 19ರ ಆಸ್ತಿ ಮೈಸೂರು-ಮಾನಂದವಾಡಿ ರಸ್ತೆಯ ಪಕ್ಕದಲ್ಲಿರುವುದರಿಂದ ಸದರಿ ಆಸ್ತಿ ತುಂಬಾ ಬೆಲೆ ಬಾಳುವ ಆಸ್ತಿಯಾಗಿರುವುದರಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಈ ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಸ.ನಂ. 19 ರಲ್ಲಿರುವ 05 ಎಕರೆ 33 ಗುಂಟೆ ಸರ್ಕಾರದ ಆಸ್ತಿಯಾಗಿರುವುದಿಲ್ಲ, ಬದಲಾಗಿ ಸದರಿ ಆಸ್ತಿಯನ್ನು ಪ್ರತಿವಾದಿ ನಸ್ರುಲ್ಲಾ ಖಾನ್ ರವರಿಂದ 2001 ರಲ್ಲಿ ಖರೀದಿಸಿರುವ ಆಸ್ತಿಯಾಗಿರುತ್ತದೆಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು-ಹಿತಾಸಕ್ತಿ ಇರುವುದಿಲ್ಲ ಮತ್ತು ನಾನು ದಾವಾ ಸ್ವತ್ತಿನಲ್ಲಿ ಯಾವತ್ತೂ ಸ್ವಾಧೀನದಲ್ಲಿರುವುದಿಲ್ಲವೆಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ಯಾವತ್ತೂ ಸ್ವಾಧೀನದಲ್ಲಿಲ್ಲದೇ ಇರುವುದರಿಂದ ಪ್ರತಿವಾದಿ ತೊಂದರೆ ಕೊಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**

This is a True Copy of the Court Records Online. Authenticated @ districts.ecourtsindia.com/cnr/KAMS210003382021/truecopy/order-5.pdf

www.ecourtsindia.com